ಪಿ.ಡಬ್ಲ್ಯೂ-1

ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ 19-09-2022

ಪಾಟಿ ಸವಾಲುಃ ಶ್ರೀ. ಪಿ.ಕೆ.ಜಿ ವಕೀಲರಿಂದ

ಪ್ರತಿವಾದಿ ನನ್ನ ಅಣ್ಣ, ನಮ್ಮ ತಂದೆ ಹೆಸರು ಮಲ್ಲಪ್ಪ ಅವರಿಗೆ 5 ಜನ ಮಕ್ಕಳಿರುತ್ತಾರೆ, ನನ್ನ ಅಣ್ಣಂದಿರಾದ ರಾಮಪ್ಪ ಮತ್ತು ಹೊನ್ನಪ್ಪ ದಿಃ 22-05-1982 ರಲ್ಲಿ ಪಾಲು ಪಡೆದು ನಮ್ಮ ಕುಟುಂಬದಿಂದ ಹೊರ ಹೋಗಿರುತ್ತಾರೆ, ಆಗ ನಾವು 3 ಜನರು ಅಪ್ರಾಪ್ತರಾಗಿರುತ್ತೇವೆ, ನಮ್ಮ ತಂದೆ ಮತ್ತು ನವು 3 ಜನ ಒಟ್ಟಿಗೆ ವಾಸವಾಗಿರುತ್ತೇವೆ, ನನ್ನ ತಂದೆ ಮೃತಪಟ್ಟಿರುತ್ತಾರೆ, ಈಗ ನಾವು 3 ಜನ ಬೇರೆ ಬೇರೆ ವಾಸವಾಗಿರುತ್ತೇವೆ, 1992 ನೇ ಸಾಲಿನಿಂದ ನಾವು ಬೇರೆ ಬೇರೆ ವಾಸವಾಗಿರುತ್ತೇವೆ, 1992 ರಲ್ಲಿ ಗ್ರಾಮಸ್ಥರ ಸಮ್ಮುಖದಲ್ಲಿ ವಿಭಾಗ ಮಾಡಿಕೊಂಡಿದ್ದು ಅದು ನೊಂದಣಿ ಆಗಿರುವುದಿಲ್ಲ, ಆ ಪಾಲು ಪರಿಕತ್ ನಲ್ಲಿ ಪ್ರತಿವಾದಿ ಭಾಗವಹಿಸಿಲ್ಲ ಮತ್ತು ಅವರ ಸಹಿ ಇಲ್ಲ ಎಂದರೆ ಸರಿಯಲ್ಲ.

1992 ರಲ್ಲಿ ಆದ ವಿಭಾಗ ಪತ್ರವನ್ನು ನೊಂದಾಯಿಸಲು ತೊಂದರೆ ಇರಲಿಲ್ಲ, ಪ್ರತಿವಾದಿ 1992 ರ ವಿಭಾಗದಲ್ಲಿ ಭಾಗವಹಿಸದ ಕಾರಣ ಸದರಿ ದಾಖಲೆಯನ್ನು ನೊಂದಾಯಿಸಿಲ್ಲ ಎಂದರೆ ಸರಿಯಲ್ಲ, ನಮ್ಮ ಕುಟುಂಬಕ್ಕೆ ದೊಡ್ಡ ಮಳ್ತೆ, ಸುಳಿಮಳ್ತೆ ಮತ್ತು ಕಿಬ್ಬೆಟ್ಟ ಗ್ರಾಮಗಳಲ್ಲಿ ಆಸ್ತಿ ಇರುತ್ತದೆ, ದಾವಾ ಜಾಗ ಕಿಬ್ಬೆಟ್ಟ ಗ್ರಾಮದಲ್ಲಿರುತ್ತದೆ, ಅದರ ಮೂಲ ಸರ್ವೆ ನಂ. 7 ಆಗಿರುತ್ತದೆ ವಿಭಾಗದ ನಂತರ 7/1 ಆಗಿರುತ್ತದೆ, ಸರ್ವೆ ನಂ. 7 ರಲ್ಲಿ 4 ಎಕರೆ 35 ಸ್ೆಂಟ್ ಜಾಗ ಇರುತ್ತದೆ ಅದರಲ್ಲಿ ಹೊನ್ನಪ್ಪ ಮತ್ತು ಪುಟ್ಟಸ್ವಾಮಿ ಮತ್ತು ನಾನು ಇರುತ್ತೇವೆ, ಹೊನ್ನಪ್ಪ ರವರಿಗೆ 1 ಎಕರೆ 63 ಸೆಂಟ್, ನನಗೆ 2 ಎಕರೆ 72 ಸ್ೆಂಟ್ ಬಂದಿರುತ್ತದೆ. ಸರ್ವೆ ನಂ. 7 ರಲ್ಲಿ ಹೊನ್ನಪ್ಪ ರವರಿಗೆ 1 ಎಕರೆ 63 ಸೆಂಟ್ ಬಿಟ್ಟು ಉಳಿದ ಜಾಗವನ್ನು ಬೇರೆ ಯಾರಿಗೂ ಹಂಚಿಕೆ ಮಾಡಿಲ್ಲ ಎಂದರೆ ಸರಿ. ನಮ್ಮ ತಂದೆಗೆ ಮತ್ತು ನಮಗೆ 2 ಎಕರೆ 72 ಗುಂಟೆ ಹಂಚಿಕೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪಟ್ಟಿ ನನಗೆ, ಪ್ರತಿವಾದಿಗೆ, ಚಂದ್ರಪ್ಪ,

ಮತ್ತು ನನ್ನ ತಂದೆಗೆ ಬಂದಿರುತ್ತದೆ, ಸದರ ವಿಭಾಗದ ಮೂಲಕ ಹೊನ್ನಪ್ಪ ರವರಿಗೆ 1.63 ಹೋಗಿರುತ್ತದೆ ನಮ್ಮ 4 ಜನರ ಪಾಲಗೆ 1.60 ಬಂದಿರುತ್ತದೆ ಎಂದರೆ ಸರಿಯಲ್ಲ, ಸದರಿ ದಾಖಲೆಯಲ್ಲಿ ನಮೂದಿಸಿರುವುದು ಸರಿಯಲ್ಲ.

ರಾಮಪ್ಪ ರವರಿಗೆ ಆಸ್ತಿ ಹಂಚಿಕೆ ಆಗಿರುವುದಿಲ್ಲ, ಉಳಿದ ಜಾಗ 1.09 ಸೆಂಟಿ ಜಾಗ ಯಾರಿಗೂ ಹಂಚಿಕೆ ಆಗಿಲ್ಲ ನಿಪಿ 1 ರ ಪ್ರಕಾರ ಎಂದರೆ ಸರಿಯಲ್ಲ, ನಿಪಿ 13 ರ ಪ್ರಕಾರ ಕೃಷ್ಣಪ್ಪ ರವರ ಸಹಿಯನ್ನು ಅವರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ, 1983 ರ ಮೂಲ ವಿಭಾಗ ಪತ್ರ ಯಾರ ಬಳಿ ಇದೆ ಎಂದರೆ ನನಗೆ ಗೊತ್ತಿಲ್ಲ. ಅದೆಲ್ಲದಕ್ಕೂ ನಮ್ಮ ತಂದೆ ಮಲ್ಲಪ್ಪ ಎಂದು ಸಹಿ ಮಾಡಿರುತ್ತಾರೆ ಎಂದರೆ ಸರಿ, ಅವರಿಗೆ ವಯಸ್ಸಾದ ಕಾರಣ 1992 ರ ಪಾಲುಪರಿಕತ್ತಿನಲ್ಲಿ ಹೆಬ್ಬೆಟ್ಟು ಹಾಕಿರುತ್ತಾರೆ, ಅವರು ಆಗಲೂ ಸಹ ಸಹಿ ಮಾಡುತ್ತಿದ್ದರು ಸದರಿ ದಾಖಲೆಯನ್ನು ನಾನು ಮತ್ತು ಇನ್ನೊಬ್ಬ ಸಹೋದರ ಚಂದ್ರಪ್ಪ ಸೇರಿ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ, ಸರ್ವೆ ನಂ. 7 ರಲ್ಲಿ ನಮ್ಮ ಪಾಲಿಗೆ 2 ಎಕರೆ 72 ಸೆಂಟ್ ಜಾಗ ನನಗೆ ಬಂದಿಲ್ಲ ಎಂದರೆ ಸರಿಯಲ್ಲ, ವಿಭಾಗ ಪತ್ರದ 3 ನೇ ಪುಟದ 4 ನೇ ಪ್ಯಾರಾದಲ್ಲಿ 95 ನೇ ಸಾಲಿನಲ್ಲಿ ಚಂದ್ರಪ್ಪ ರವರಿಗೆ ಆಸ್ತಿ ವರ್ಗಾವಣೆ ಆಗಿದೆ ಎಂದು ತಿಳಿಸಿರುತ್ತೇವೆ ಆದ ಕಾರಣ ಸದರಿ ದಾಖಲೆಯನ್ನು ನಾವು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ, ಸರ್ವೆ ನಂ. 7/1 ಈಗ ನನ್ನ ಹೆಸರಿನಲ್ಲಿರುತ್ತದೆ.

ಮುಂದುವರೆದ ಪಾಟಿ ಸವಾಲನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

ಸಹಿ/-

ಓ ಹೇ ಕೇ ಸರಿ ಇದೆ

ಪ್ರ ದ ನ್ಯಾ ದಂ ಸೋ ಪೇಟೆ